# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560 001

ಸಂಖ್ಯೆ: ಯೋ(1) ಮು.ಯೋ.ಕಾ.ಹ.ಬಿ. 01/2011-12 ದಿನಾಂಕ:07-04-2011

**ಜ್ಞಾಪನಾ**

**ವಿಷಯ:-** 2011-12ನೇ ಸಾಲಿಗೆ ಶಿಕ್ಷಣ ಇಲಾಖೆಯ ರಾಜ್ಯ ವಲಯದ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅನುಮೋದನೆ ನೀಡಿ ಹಣ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:-**ಸರ್ಕಾರಿ ಆದೇಶದ ಸಂಖ್ಯೆ: ಇಡಿ 47 ಯೋಯೋಕ 2011 ಬೆಂಗಳೂರು ದಿನಾಂಕ: 02.4.2011

*&*&*&*&*&*&*&*&*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ 2011-12ನೇ ಸಾಲಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

| ಸರ್ಕಾರಿ ಆದೇಶದಲ್ಲಿನ ಕ್ರ.ಸಂ/ಸ್ಕೀಂ ಸಂಖ್ಯೆ | ಕಾರ್ಯಕ್ರಮ/ಉಪಕಾರ್ಯಕ್ರಮದ ಹೆಸರು ಹಾಗೂ ಲೆಕ್ಕ ಶೀರ್ಷಿಕೆ | 2011-12ನೇ ಸಾಲಿಗೆ ಸರ್ಕಾರ ನಿಗಧಿಪಡಿಸಿದ ಅನುದಾನ (ರೂ ಲಕ್ಷಗಳಲ್ಲಿ) | ಅನುಷ್ಠಾನಗೊಳಿಸಬೇಕಾದ ಕಾರ್ಯಕ್ರಮ | ಅನುಷ್ಠಾನಾಧಿಕಾರಿಗಳು |
|---|---|---|---|---|
| ಎಸ್-1 | ಪರಿವೀಕ್ಷಣೆ(ಪ್ರಾಥಮಿಕ)<br>2202-01-104-0-00-059 | **70.00** | **ವಿವರ ಎಸ್ 1(1) ರಿಂದ ಎಸ್ 1(2)ರ ವರೆಗೆ ಇರುತ್ತದೆ.** | |
| ಎಸ್-1(1) | ಪರಿವೀಕ್ಷಣೆ(ಪ್ರಾಥಮಿಕ)<br>2202-01-104-0-00-059 | **20.00** | ಜಿಲ್ಲಾ ಉ.ನಿ/ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯಕ್ಕೆ ಕಂಪ್ಯೂಟರ್, ಸ್ಟೇಷನರಿ ಮುಂತಾದವುಗಳ ಖರೀದಿಗಾಗಿ. ರೂ.20.00 ಲಕ್ಷ. | ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್-1(2) | ಪರಿವೀಕ್ಷಣೆ(ಪ್ರಾಥಮಿಕ)<br>2202-01-104-0-00-059 | **50.00** | ಜಿಲ್ಲಾ ಉಪನಿರ್ದೇಶಕರ ಕಛೇರಿ ಸಾದಿಲ್ವಾರು ವೆಚ್ಚಕ್ಕಾಗಿ ರೂ.50.00 ಲಕ್ಷ. | ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್-2 | ವಿದ್ಯಾವಿಕಾಸ (ಉಚಿತ ಸಮವಸ್ತ್ರ ಸರಬರಾಜು ಮಾಡುವ ಕಾರ್ಯಕ್ರಮ )<br>2202-01-109-0-03<br>133-1500.00<br>221-2419.00<br>422-3700.00<br>423-700.00 | **8319.00** | 2011-12ನೇ ಸಾಲಿಗೆ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಒಂದು ಜೊತೆ ಉಚಿತ ಸಮವಸ್ತ್ರ ಒದಗಿಸಲು ಹಾಗು 2010-11ನೇ ಸಾಲಿನ ಕೊರತೆ ಅನುದಾನ ರೂ 1600.00 ಲಕ್ಷಗಳ ವೆಚ್ಚ ಭರಿಸಲು ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಮತ್ತು ವಿಶೇಷ ಅಭಿವೃದ್ಧಿ ಯೋಜನೆಯ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸುವ ಷರತ್ತನ್ನು ವಿಧಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್-3 | ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು<br>2202-01-800-1-35<br>002-2.11 ಲಕ್ಷ<br>011- 1.48 ಲಕ್ಷ<br>014-0.58 ಲಕ್ಷ<br>021-1.00 ಲಕ್ಷ | **1430.00** | **ವಿವರ ಎಸ್ 3(1) ರಿಂದ ಎಸ್ 3(11)ರ ವರೆಗೆ ಇರುತ್ತದೆ.** | |

| | | | | |
|---|---|---|---|---|
| | 059–294.83 ಲಕ್ಷ<br>422–800.00 ಲಕ್ಷ<br>423–330.00ಲಕ್ಷ | | | |
| ಎಸ್–3(1) | ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ಶೈಕ್ಷಣಿಕ ಚಟುವಟಿಕೆಗಳಿಗಾಗಿ<br>2202–01–800–1–35–422 | **40.00** | ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ಶೈಕ್ಷಣಿಕ ಚಟುವಟಿಕೆಗಳಿಗಾಗಿ.<br>ಕಛೇರಿ ಆಧುನೀಕರಣಕ್ಕಾಗಿ ಯಂತ್ರೋಪಕರಣಗಳ ಖರೀದಿಗಾಗಿ<br>ಕಛೇರಿ ಸಾಮಾನ್ಯ ವೆಚ್ಚಗಳಿಗೆ | ನಿರ್ದೇಶಕರು (ಮೈನಾರಿಟಿ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–3(2) | ಪ್ರೌಢಶಾಲಾ ಅಭಿವೃದ್ಧಿ ಯೋಜನೆಯಡಿ ಪ್ರೌಢಶಾಲೆಗಳಿಗೆ ಪೀಠೋಕರಣ ಒದಗಿಸಲು.<br>2202–01–800–1–35–422 | **100.00** | ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರಗಳಿರುವ ಪ್ರೌಢಶಾಲೆಗಳಿಗೆ /ಪದವಿ ಪೂರ್ವ ಕಾಲೇಜುಗಳಿಗೆ (ಪ್ರೌಢಶಾಲಾ ವಿಭಾಗಕ್ಕೆ) ಪೀಠೋಪಕರಣ ಒದಗಿಸಲು. | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–3(3) | ಮಧ್ಯಾಹ್ನ ಉಪಹಾರ ಯೋಜನೆ(ವೇತನ ವೆಚ್ಚಗಳಿಗಾಗಿ)<br>2202–01–800–1–35– | **5.17** | ಪತ್ರಾಂಕಿತ ವ್ಯವಸ್ಥಾಪಕರ ವೇತನ ವೆಚ್ಚಗಳಿಗಾಗಿ (ಎಂ.ಎಂ.ಎಸ್.)<br>002=2,11,000.00<br>011= 1,48,000.00<br>014= 58,000.00<br>021= 1,00,000.00<br>ಒಟ್ಟು ರೂ.5,17,000.00 | ಜಂಟಿ ನಿರ್ದೇಶಕರು, ಎಂ.ಎಂ.ಎಸ್ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. |
| ಎಸ್ 3(4) | ಮಧ್ಯಾಹ್ನ ಉಪಹಾರ ಯೋಜನೆ ಕೇಂದ್ರ ಕಾರ್ಯಾಲಯದ ವೆಚ್ಚಗಳಿಗಾಗಿ<br>2202–01–800–1–35–059 | **23.00** | ಎಂ.ಎಂ.ಎಸ್.ಕೇಂದ್ರ ಕಾರ್ಯಾಲಯದ ವೆಚ್ಚಗಳಿಗಾಗಿ. | ಜಂಟಿ ನಿರ್ದೇಶಕರು, ಎಂ.ಎಂ.ಎಸ್ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. |
| ಎಸ್ 3(5) | ಪ್ರತಿಬಾ ಕಾರಂಜಿ – ಕ್ಲಸ್ಟರ್,ತಾಲ್ಲೂಕು, ಜಿಲ್ಲಾ, ರಾಜ್ಯ ಮಟ್ಟದ ಕಾರ್ಯಕ್ರಮ<br>2202–01–800–1–35–422– 250.00 ಲಕ್ಷ | **250.00** | ಪ್ರತಿಭಾ ಕಾರಂಜಿ ಕಾರ್ಯಕ್ರಮಗಳನ್ನು ಕ್ಲಸ್ಟರ್, ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಏರ್ಪಡಿಸಲು. | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |

| | | | | |
|---|---|---|---|---|
| ಎಸ್ 3(6) | ರಾಷ್ಟ್ರೀಯ ಕ್ರೀಡಾಕೂಟ ಸಂಘಟನೆ, ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾ ಪಟುಗಳಿಗೆ ತರಬೇತಿ, ಶಾಲೆಗೆ ಕ್ರೀಡಾ ಉಪಕರಣಗಳನ್ನು ಕೊಳ್ಳಲು, ಆಟದ ಮೈದಾನದ ಅಭಿವೃದ್ಧಿ, ಸರ್ಕಾರಿ ದೈಹಿಕ ಶಿಕ್ಷಣ ತರಬೇತಿ ಕಾಲೇಜು ಉನ್ನತೀಕರಿಸುವುದು ಹಾಗೂ ದೈಹಿಕ ಶಿಕ್ಷಣ ಅಭಿವೃದ್ಧಿಗೊಳಿಸಲು 2202–01–800–1–35–422= 280.00 | **280.00** | 1. ರಾಷ್ಟ್ರೀಯ ಕ್ರೀಡಾಕೂಟ ಸಂಘಟಿಸಲು<br>2. ರಾಜ್ಯ/ರಾಷ್ಟ್ರ ಮಟ್ಟದ ತರಬೇತಿಗಾಗಿ.<br>3. ಸರ್ಕಾರಿ ಹಿ.ಪ್ರಾ.ಶಾಲೆ ಮತ್ತು ಸರ್ಕಾರಿ ಪ್ರೌಢಶಾಲೆಯನ್ನು ಮಾದರಿ ಕ್ರೀಡಾ ಶಾಲೆಯನ್ನಾಗಿ ಮಾಡಲು ಅಗತ್ಯ ಉಪಕರಣಗಳ ಖರೀದಿಗಾಗಿ 34 ಜಿಲ್ಲೆಗಳಿಗೆ<br>4. 200 ಮೀ. ಓಟದ ಕ್ರೀಡಾಂಗಣವನ್ನು ಶಾಲಾ ಮೈದಾನದಲ್ಲಿ ಅಭಿವೃದ್ಧಿ ಪಡಿಸಲು ಹಾಗೂ ಮೇಲಾಟದ ಸೌಲಭ್ಯ ಒದಗಿಸಲು 34 ಜಿಲ್ಲೆಗಳಿಗೆ<br>5. ಜಿಲ್ಲಾ ಮಟ್ಟದಲ್ಲಿ ವಿಜೇತರಾದ ಕ್ರೀಡಾ ಪಟುಗಳಿಗೆ ಬಹುಮಾನ ನೀಡಲು<br>6. ಚಿಕ್ಕಬಳ್ಳಾಪುರ ಜಿಲ್ಲೆ ಅಗಲಗುರ್ಕಿ ಸರ್ಕಾರಿ ದೈಹಿಕ ಶಿಕ್ಷಣ ಕಾಲೇಜು ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ<br>7 ಭಾರತ ಸೇವಾದಲದ ಅಭೀವೃದ್ಧಿ ಕಾರ್ಯಗಳಿಗೆ. | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್ 3(7) | ಸರ್ಕಾರಿ ಉಪಾದ್ಯಯರ ತರಬೇತಿ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕಾಗಿ ಹಾಗು ಸರ್ಕಾರಿ ಉಪಾದ್ಯಯರ ತರಬೇತಿ ಕೇಂದ್ರಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು. 2202–01–800–1–35–059 | **145.00** | 1.ರಾಜ್ಯದ ಸರ್ಕಾರಿ ಉಪಾಧ್ಯಾಯರ ತರಬೇತಿ ಸಂಸ್ಥೆಗಳಿಗೆ ಕಟ್ಟಡ ದುರಸ್ತಿಗಾಗಿ ರೂ 60.00 ಲಕ್ಷ<br>2.ರಾಜ್ಯದ ಸರ್ಕಾರಿ ಉಪಾಧ್ಯಾಯರ ತರಬೇತಿ ಸಂಸ್ಥೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ರೂ 30.00 ಲಕ್ಷ<br>3. ಡಿ.ಎಸ್.ಇ.ಆರ್.ಟಿ. ವಿಭಾಗವಾದ ಸೆರಿಕ್ ಗ್ರಂಥಾಲಯದ ನಿರ್ವಹಣೆಗಾಗಿ ರೂ 05.00 ಲಕ್ಷ<br>4. ಡಿ.ಎಸ್.ಇ.ಆರ್.ಟಿ.ಯ ಅತಿಥಿಗೃಹ ನಿರ್ವಹಣೆ ರೂ 15.00 ಲಕ್ಷ<br>5. NTSE/NMMS ಪರೀಕ್ಷೆ ನಿರ್ವಹಣೆಗಾಗಿ ರೂ 30.00 ಲಕ್ಷ<br>6. ಮೌಲ್ಯಮಾಪನ ಸಂಪನ್ಮೂಲ ಪುಸ್ತಕ ರಚನೆಗಾಗಿ ರೂ 5.00 ಲಕ್ಷ | ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಹೊಸಕೆರೆ ಹಳ್ಳಿ, ಬೆಂಗಳೂರು. |
| ಎಸ್ 3(8) | ಇ–ಆಡಳಿತ ಕಾರ್ಯಕ್ರಮದಡಿ ಕಂಪ್ಯೂಟರ್ ಹಾರ್ಡ್‌ವೇರ್, ಸಾಫ್ಟ್‌ವೇರ್ ಖರೀದಿಗಾಗಿ 2202–01–800–1–35–<br>059–126.83 ಲಕ್ಷ<br>422–130.00 ಲಕ್ಷ<br>423–142.00 ಲಕ್ಷ | **398.83** | ಇಲಾಖಾ ತಂತ್ರಾಂಶಗಳನ್ನು ಬಳಸಲು ಹಿಂದಿನ ಸಾಲುಗಳಲ್ಲಿ ಉಪನಿರ್ದೇಶಕರ ಕಛೇರಿಗಳಿಗೆ ಗಣಕ ಯಂತ್ರ ಹಾಗೂ ಇತರೆ ಉಪಕರಣಗಳ ಸರಬರಾಜಾಗಿದ್ದು, ಈ ಹಿಂದೆ ನೀಡಿದ 05 ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳನ್ನು ಹೊರತುಪಡಿಸಿ ಇನ್ನುಳಿದ 197 ಕಛೇರಿಗಳಿಗೆ ಗಣಕ ಯಂತ್ರ ಹಾಗೂ ಇತರೆ ಉಪಕರಣಗಳನ್ನು ಸರಬರಾಜು ಮಾಡುವ ಸಲುವಾಗಿ ಹಾಗು 2007–08ನೇ ಸಾಲಿನಲ್ಲಿ ಇಲಾಖಾ ವತಿಯಿಂದ 05 ಉಪನಿರ್ದೇಶಕರ ಕಛೇರಿ ಮತ್ತು 02 ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಸರಬರಾಜು ಮಾಡಿದ ಗಣಕ ಯಂತ್ರ ಹಾಗೂ ಇತರೆ ಉಪಕರಣಗಳಿಗೆ ವಾರ್ಷಿಕ ನಿರ್ವಹಣಾ ವೆಚ್ಚಕ್ಕಾಗಿ. | ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ |

| | | | | |
|---|---|---|---|---|
| ಎಸ್.3(9) | ಇ.ಎಂ.ಐ.ಎಸ್.ಚಟುವಟಿಕೆಗಳಿಗಾಗಿ 2202–01–800–1–35–423 | **80.00** | ಇ.ಎಂ.ಐಎಸ್. ತರಬೇತಿ ಹಾಗೂ ಆನ್–ಲೈನ್ ತಂತ್ರಾಂಶಗಳ ಅಭಿವೃದ್ಧಿಗಾಗಿ. | ಸಹನಿರ್ದೇಶಕರು, ಎಸ್.ಎಸ್.ಎ |
| ಎಸ್3(10) | ಶೈಕ್ಷಣಿಕ ಕಾರ್ಯಕ್ರಮಗಳಿಗೆ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನೀಡಲು 2202–01–800–1–35–423 | **70.00** | ಶೈಕ್ಷಣಿಕ ಕಾರ್ಯಕ್ರಮಗಳಿಗೆ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನೀಡಲು ಬಿತ್ತಿ ಪತ್ರ, ಕರಪತ್ರಗಳನ್ನು ಹೊರತರಲು, ಸಭೆಗಳನ್ನು ಆಯೋಜಿಸಲು. | ಸಹ ನಿರ್ದೇಶಕರು, ಶಾಲಾ ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್3(11) | ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹ ನೀಡಲು 2202–01–800–1–35–423 | **38.00** | ಮಾರ್ಚ್–2011ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಪ್ರತಿ ಜಿಲ್ಲೆಯ 03 ಮಕ್ಕಳಿಗೆ ಪ್ರೋತ್ಸಾಹದಾಯಕವಾಗಿ ಗಣಕ ಯಂತ್ರ ನೀಡಲು. | ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ. ಬೆಂಗಳೂರು |
| ಎಸ್–4 | ಸರ್ವ ಶಿಕ್ಷಣ ಅಭಿಯಾನ ಸಮಿತಿ ಶೇ.50 ರಷ್ಟು ರಾಜ್ಯ ಪಾಲು ಭರಿಸಲು 2202–01–800–1–44–133–900.00 ಲಕ್ಷ 059–6600.00 ಲಕ್ಷ 422–4250.00 ಲಕ್ಷ 423–1600.00 ಲಕ್ಷ | **13350.00** | ಈ ಕಾರ್ಯಕ್ರಮಕ್ಕೆ ನಿಗದಿಯಾಗಿರುವ 13350.00 ಲಕ್ಷ ರೂಪಾಯಿಗಳು [ಹದಿಮೂರು ಸಾವಿರದ ಮುನ್ನೂರಾ ಐವತ್ತು ಲಕ್ಷ ರೂಪಾಯಿಗಳು ಮಾತ್ರ] ಮಿತಿಯೊಳಗೆ ಶೇ.50 ರಷ್ಟು ರಾಜ್ಯದ ಪಾಲಿನ ವೆಚ್ಚ ಭರಿಸಿ (ಕೇಂದ್ರ ಸರ್ಕಾರದಿಂದ ಅದರ ಪಾಲಿನ ಅನುದಾನ ಬಿಡುಗಡೆಯಾಗುವುದನ್ನು ಖಚಿತಪಡಿಸಿಕೊಂಡು) ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಮತ್ತು ವಿಶೇಷ ಅಭಿವೃದ್ಧಿ ಯೋಜನೆಯ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸುವ ಷರತ್ತನ್ನು ವಿಧಿಸಿ ಕಾರ್ಯ ಕ್ರಮವನ್ನು ಅನುಷ್ಠಾನಗೊಳಿಸಲು, | ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ |
| ಎಸ್5 | ಬ್ಲಾಕ್ ಮತ್ತು ಕ್ಲಸ್ಟರ್ ರಿಸೋರ್ಸ್‌ಸೆಂಟರ್ 2202–01–800–1–41–059 | **3000.00** | ಡಿ.ಪಿ.ಇ.ಪಿ. ಅಡಿಯಲ್ಲಿನ 16 ಜಿಲ್ಲೆಗಳಲ್ಲಿ ಮಂಜೂರಾಗಿರುವ ಬಿ.ಆರ್.ಪಿ. ಮತ್ತು ಸಿ.ಆರ್.ಪಿ.ಗಳಡಿಯ 1882 ಹುದ್ದೆಗಳನ್ನು ಮುಂದುವರೆಸಿ ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ವೇತನ ಪಾವತಿಸಲು ಹಾಗೂ ಈ ಬಗ್ಗೆ ಪ್ರತ್ಯೇಕವಾಗಿ ಲೆಕ್ಕ ಪತ್ರಗಳನ್ನಿಡಲು ಮತ್ತು ಹುದ್ದೆಗಳ ವಿವರಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ |
| ಎಸ್6 | ಪುಸ್ತಕಾಲಯ, ಪ್ರಾಥಮಿಕ ಶಾಲೆಗಳ ಸುಧಾರಣೆ ಮತ್ತು ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ 2202–01–800–1–13–059 | **500.00** | **ವಿವರ ಎಸ್–6(1) ರಿಂದ ಎಸ್–6(3)ರವರೆಗೆ ಇರುತ್ತದೆ.** | |
| ಎಸ್6(1) | ಕೆ.ಎಸ್.ಕ್ಯು.ಎ.ಓ. 2202–01–800–1–13–059 | **200.00** | NAAC ಮಾದರಿಯಲ್ಲಿ ನೂತನ ಕೆ.ಎಸ್.ಕ್ಯು.ಎ.ಓ. ಕಾರ್ಯಚಟುವಟಿಕೆಗಳನ್ನು ಅನುಷ್ಠಾಗೊಳಿಸಲು. | ನಿರ್ದೇಶಕರು, ಕೆ.ಎಸ್.ಇ.ಇ.ಬಿ. ಬೆಂಗಳೂರು. |
| ಎಸ್6(2) | ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ ಸಂಸ್ಥೆಯವರ ಭಾರತ ಬಾರತಿ ಪುಸ್ತಕ ಖರೀದಿಗಾಗಿ. 2202–01–800–1–13–059 | **150.00** | ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ ಸಂಸ್ಥೆಯವರ ಪುಸ್ತಕ ಖರೀದಿಗಾಗಿ 2010–11ನೇ ಸಾಲಿನ ಬಾಕಿ ರೂ 50.00 ಲಕ್ಷ ಮತ್ತು 2011–12ನೇ ಸಾಲಿನ ಕಾರ್ಯಕ್ರಮ ಅನುಷ್ಠಾನಕ್ಕೆ ರೂ 100.00 ಲಕ್ಷ | ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್6(3) | ಲೇಖನ ಸಾಮಗ್ರಿ, ಪುಸ್ತಕಗಳ ಸಗಟು ಖರೀದಿ 2202–01–800–1–13–059 | **150.00** | ಸರ್ಕಾರವು ಗಣನೀಯ ಸಂಖ್ಯೆಯಲ್ಲಿ ಹೊಸ ಪ್ರೌಢಶಾಲೆಗಳನ್ನು ಮಂಜೂರು ಮಾಡಿರುವ ಕಾರಣ ಹೊಸ ಶಾಲೆಯೂ ಸೇರಿದಂತೆ ಲೇಖನ ಸಾಮಗ್ರಿಗಳ ಖರೀದಿ ಹಾಗೂ ಪುಸ್ತಕಗಳ ಸಗಟು ಖರೀದಿಗಾಗಿ. | ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |

| | | | | |
|---|---|---|---|---|
| ಎಸ್–7 | ಕುವೆಂಪು ಮಾದರಿ ಶಾಲೆಗಳು<br>2202–01–800–1–72<br>059–10.00 ಲಕ್ಷ | **10.00** | ಕಳೆದ ವರ್ಷ ಉಳಿದಿರುವ ಸಿವಿಲ್ ಕಾಮಗಾರಿ ಮತ್ತು ಇತರೆ ವೆಚ್ಚಗಳನ್ನು ಭರಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–8 | ಸಾರ್ವಜನಿಕ ಶಿಕ್ಷಣ ಆಯುಕ್ತರು, ಬೆಂಗಳೂರು ನಿರ್ದೇಶನ ಮತ್ತು ಆಡಳಿತ<br>2202–02–001–0–03 | **70.00** | **ವಿವರ ಎಸ್–8(1) ರಿಂದ ಎಸ್–8(2)ರವರೆಗೆ ಇರುತ್ತದೆ.** | |
| ಎಸ್ 8(1) | ಆಯುಕ್ತರ ಕಾರ್ಯಾಲಯ<br>2202–02–001–0–03–<br>051–29.00<br>052– 1.50<br>059–39.50<br>ಒಟ್ಟು–70.00 ಲಕ್ಷ | **65.00** | **ಅ**] ಸಾಮಾನ್ಯ ವೆಚ್ಚಗಳು, ಕಛೇರಿ ಸಾದಿಲ್ವಾರು, ಆಫೀಸ್ ಆಟೋಮೇಷನ್‌ಗಾಗಿ ಮತ್ತು ಕಛೇರಿ ಆಧುನೀಕರಣ/ ದುರಸ್ತಿಗಾಗಿ,**051–ರೂ20.00 ಲಕ್ಷ**<br>**ಆ**] ಆಯುಕ್ತರ ಆಪ್ತ ಕಾರ್ಯದರ್ಶಿ, ಯೋಜನಾ ಶಾಖೆ, ಅಂಕಿ ಅಂಶಶಾಖೆ, ಪ್ರೌಢಶಿಕ್ಷಣ, ಪ್ರಾಥಮಿಕ ಶಿಕ್ಷಣ ಮತ್ತು ಸಂಸ್ಕೃತ ಶಾಖೆಯ ಉಪನಿರ್ದೇಶಕರುಗಳ ನಿವಾಸದ ದೂರವಾಣಿ ವೆಚ್ಚ ಭರಿಸಲು, **052–ರೂ.1.50 ಲಕ್ಷ,**<br>ಇ]ಆಯುಕ್ತರ ಕಛೇರಿ ಯಂತ್ರೋ ಪಕರಣಗಳ ನಿರ್ವಹಣಾ ವೆಚ್ಚಕ್ಕಾಗಿ ಮತ್ತು ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರಿಗೆ ತರಬೇತಿ ನೀಡಲು.<br>051–ರೂ.09.00ಲಕ್ಷ<br>059–ರೂ.34.50ಲಕ್ಷ<br>**ಒಟ್ಟು–ರೂ.43.50ಲಕ್ಷ** | ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್ 8(2) | ಯೋಜನಾ ಶಾಖೆಯ ಸಭಾ ನಿರ್ವಹಣಾ ವೆಚ್ಚಗಳಿಗಾಗಿ<br>2202–02–001–0–03–059 | **5.00** | ಆಯುಕ್ತರ ಕಛೇರಿ ಯೋಜನಾ ಶಾಖೆಯ ಸಭೆಗಳ ನಿರ್ವಹಣೆಯ ವೆಚ್ಚಗಳಿಗಾಗಿ. | ಉಪನಿರ್ದೇಶಕರು (ಯೋಜನೆ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–11 | ಪರಿವೀಕ್ಷಣೆ(ಸೆಕೆಂಡರಿ)<br>2202–02–101–0–00–<br>059–55.00<br>041–13.00<br>051–12.00 | **80.00** | **ವಿವರ ಎಸ್–11(1) ರಿಂದ ಎಸ್–11(5)ರವರೆಗೆ ಇರುತ್ತದೆ.** | |
| ಎಸ್–11(1) | ಸ.ಪ್ರೌ.ಶಾಲೆಗಳ ಪ್ರೌಢಶಾಲಾ ವಿದ್ಯಾರ್ಥಿಗಳ ಪ್ರಗತಿ ಪತ್ರ<br>2202–02–101–0–00–059 | **10.00** | ಸ.ಪ್ರೌ.ಶಾಲೆಗಳ ಪ್ರೌಢಶಾಲಾ ವಿದ್ಯಾರ್ಥಿಗಳ ಪ್ರಗತಿ ಪತ್ರಗಳನ್ನು ಮುದ್ರಿಸಿ ಸರಬರಾಜು ಮಾಡಲು.<br>. | ವ್ಯವಸ್ಥಾಪಕ ನಿರ್ದೇಶಕರು. ಪಠ್ಯಪುಸ್ತಕ ಸಂಘ ಬೆಂಗಳೂರು |
| ಎಸ್11(2) | ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ ಪುಸ್ತಕಗಳ ಮುದ್ರಣ ವೆಚ್ಚಕ್ಕಾಗಿ<br>2202–02–101–0–00–059 | **8.00** | ಪ್ರೌಢಶಾಲಾ ಶೈಕ್ಷಣಿಕ ಮಾರ್ಗದರ್ಶಿ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು. | ನಿರ್ದೇಶಕರು (ಡಿ.ಎಸ್.ಇ.ಆರ್.ಟಿ.) ಬೆಂಗಳೂರು |
| ಎಸ್11(3) | ವಿಭಾಗೀಯ ಸಹ ನಿರ್ದೇಶಕರ ಕಛೇರಿಗಳ ಪ್ರಯಾಣ ವೆಚ್ಚಗಳಿಗಾಗಿ<br>2202–02–101–0–00–041 | **13.00** | ಮೈಸೂರು/ಬೆಳಗಾಂ ವಿಭಾಗೀಯ ಸಹ ನಿರ್ದೇಶಕರ ಕಾರ್ಯಾಲಯಗಳ ಪ್ರಯಾಣ ವೆಚ್ಚಗಳಿಗಾಗಿ. | ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |

| | | | | |
|---|---|---|---|---|
| ಎಸ್11(4) | ವಿಭಾಗೀಯ ಸಹ ನಿರ್ದೇಶಕರ ಕಛೇರಿಯ ಸಾಮಾನ್ಯ ವೆಚ್ಚಗಳಿಗಾಗಿ 2202–02–101–0–00–051 | **12.00** | ಮೈಸೂರು/ಬೆಳಗಾಂ ವಿಭಾಗೀಯ ಸಹ ನಿರ್ದೇಶಕರ ಕಾರ್ಯಾಲಯಗಳ ಸ್ಟೇಷನರಿ, ಸಾದಿಲ್ವಾರು ವೆಚ್ಚಗಳಿಗಾಗಿ. | ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್11(5) | ಆಯುಕ್ತರ ಕಛೇರಿಯ ಕಂಪ್ಯೂಟರ್, ಯುಪಿಎಸ್, ರೈಸೋಗ್ರಾಫ್, ಜೆರಾಕ್ಸ್ ಯಂತ್ರಗಳ ನಿರ್ವಹಣೆಗಾಗಿ ಜೆರಾಕ್ಸ್ ಯಂತ್ರಗಳ ಖರೀದಿ ಮತ್ತು ಅಗತ್ಯ ಸ್ಟೇಷನರಿ ಖರೀದಿ 2202–02–101–0–00–059 | **37.00** | ಆಯುಕ್ತರ ಕಛೇರಿಯ ಕಂಪ್ಯೂಟರ್, ಯುಪಿಎಸ್, ರೈಸೋಗ್ರಾಫ್, ಜೆರಾಕ್ಸ್ ಯಂತ್ರಗಳ ವಾರ್ಷಿಕ ನಿರ್ವಹಣೆಗಾಗಿ ಜೆರಾಕ್ಸ್ ಯಂತ್ರಗಳ ಖರೀದಿ ಮತ್ತು ಅಗತ್ಯ ಸ್ಟೇಷನರಿ ಖರೀದಿಗಾಗಿ . | ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–12 | ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ 2202–02–800–1–01– 422–350.00 ಲಕ್ಷ 423–100.00 ಲಕ್ಷ | **450.00** | ಈ ಕಾರ್ಯಕ್ರಮಕ್ಕೆ ನಿಗದಿಯಾಗಿರುವ 450.00 ಲಕ್ಷರೂಪಾಯಿಗಳ[ನಾನೂರಾ ಐವತ್ತು ಲಕ್ಷ ರೂಪಾಯಿಗಳುಮಾತ್ರ] ಮಿತಿಯೊಳಗೆ ಪ.ಜಾತಿ/ಪ.ವರ್ಗದ ಎಲ್ಲಾ ಮಕ್ಕಳ ಪರೀಕ್ಷಾ ಶುಲ್ಕ ಮರುಪಾವತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ. ಬೆಂಗಳೂರು |
| ಎಸ್–13 | ಪ್ರೌಢಶಾಲಾ ಕಟ್ಟಡಗಳ ನಿರ್ಮಾಣ 2202–02–800–1–10–059 | **600.00** | **ವಿವರ ಎಸ್–13(1) ರಿಂದ ಎಸ್–13(3)ರವರೆಗೆ ಇರುತ್ತದೆ.** | |
| ಎಸ್–13(1) | ಪ್ರೌಢಶಾಲಾ ಕಟ್ಟಡಗಳ ನಿರ್ಮಾಣ 2202–02–800–1–10–059 | **225.00** | ಅತೀ ಅವಶ್ಯವಿರುವ ನಗರ ಪ್ರದೇಶದ ಕಟ್ಟಡರಹಿತ ಪ್ರೌಢಶಾಲೆಗಳಿಗೆ ಕೊಠಡಿ ನಿರ್ಮಾಣಕ್ಕಾಗಿ. | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–13(2) | ಪ್ರೌಢಶಾಲಾ ಕಟ್ಟಡಗಳ ನಿರ್ಮಾಣ 2202–02–800–1–10–059 | **225.00** | ಜಿಲ್ಲಾಉಪನಿರ್ದೇಶಕರುಗಳ ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣ ಮತ್ತು ದುರಸ್ತಿಗಾಗಿ. | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–13)3) | ಪ್ರೌಢಶಾಲಾ ಕಟ್ಟಡಗಳ ನಿರ್ಮಾಣ 2202–02–800–1–10–059 | **150.00** | ಭೂಸ್ವಾಧೀನಕ್ಕಾಗಿ. | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಸ್–14 | 8ನೇ ತರಗತಿ ವಿದ್ಯಾರ್ಥಿಗಳಿಗೆ ಬೈಸಿಕಲ್ ನೀಡಿಕೆ 2202–02–800–1–12– 133–2500.00 ಲಕ್ಷ 059–5050.00 ಲಕ್ಷ 422–3000.00 ಲಕ್ಷ 423–1950.00 ಲಕ್ಷ | **12500.00** | ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ಮಕ್ಕಳಿಗೆ ಉಚಿತ ಬೈಸಿಕಲ್ ವಿತರಿಸಲು ಪತ್ರಿಕಾ ಪ್ರಕಟಣೆ ವೆಚ್ಚ ಮತ್ತು ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಗೆ ತರಬೇತಿ ಸಭೆಗಳ ವೆಚ್ಚಗಳಿಗಾಗಿ ರೂ.10.00 ಲಕ್ಷಗಳನ್ನು ಭರಿಸಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಹಾಗೂ ವಿಶೇಷ ಅಭಿವೃದ್ಧಿ ಯೋಜನೆಗೆ ಒದಗಿಸಿರುವ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸಿ ಕಾರ್ಯಕ್ರಮ ಅನುಷ್ಠಾನಗೊಳಿಸಲು. | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–15 | ಪಂಚಸೌಲಭ್ಯ 2202–01–800–1–73– 422–2500.00 ಲಕ್ಷ 423–1000.00 ಲಕ್ಷ | **4000.00** | ರಾಜ್ಯದಲ್ಲಿನ ಪ್ರಾಥಮಿಕ/ ಪ್ರೌಢಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ವ್ಯವಸ್ಥೆ ಕಲ್ಪಿಸಲು ಪ್ರಾಥಮಿಕ – ರೂ.1800.00 ಲಕ್ಷ ಪ್ರೌಢ –ರೂ 1800.00 ಲಕ್ಷ | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. **ಮತ್ತು** |

| | | | | |
|---|---|---|---|---|
| | 133–500.00 ಲಕ್ಷ | | ಹಾಗು ಪ್ರಾಥಮಿಕ/ ಪ್ರೌಢಶಾಲೆಗಳಿಗೆ ಕಾಂಪೌಂಡ್ ನಿರ್ಮಿಸಲು,<br>ಪ್ರಾಥಮಿಕ – ರೂ.100.00 ಲಕ್ಷ<br>ಪ್ರೌಢ –ರೂ.100.00 ಲಕ್ಷ ಹಾಗು<br>ಪ್ರೌಢಶಾಲೆಗಳ ಕಟ್ಟಡ ನಿರ್ಮಾಣಕ್ಕಾಗಿ<br>ರೂ–200.00 ಲಕ್ಷ<br>ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಹಾಗೂ ವಿಶೇಷ ಅಭಿವೃದ್ಧಿ ಯೋಜನೆಗೆ ಒದಗಿಸಿರುವ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸಿ ಕಾರ್ಯಕ್ರಮ ಅನುಷ್ಠಾನಗೊಳಿಸಲು. | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–16 | ಶಿಕ್ಷಣ ಆಡಳಿತ ಸುಧಾರಣೆಗಾಗಿ ಕರ್ನಾಟಕಕ್ಕೆ ಐಡಿಎಫ್ ಅನುದಾನ<br>2202–01–800–1–04–059 | **200.00** | ಈ ಕಾರ್ಯಕ್ರಮಕ್ಕೆ ನಿಗದಿಯಾಗಿರುವ 200.00 ಲಕ್ಷ ರೂಪಾಯಿಗಳು[ಇನ್ನೂರು ಲಕ್ಷ ರೂಪಾಯಿಗಳುಮಾತ್ರ] ನಿಗದಿಯಾಗಿದ್ದು, ಇದರಲ್ಲಿ 50.00ಲಕ್ಷರೂಗಳನ್ನು ಯೋಜನೆ ಕಾರ್ಯಕ್ರಮಗಳ ಘಟಕಕ್ಕೆ (ಪಿ.ಪಿ.ಯು) ಸಂಬಂಧಪಟ್ಟ ಅಂಗೀಕೃತ ವೆಚ್ಚಗಳಿಗಾಗಿ ಬಳಸಿಕೊಳ್ಳಲು ಮತ್ತು ರೂ.150.00ಲಕ್ಷಗಳನ್ನು ಶಿಕ್ಷಣ ಆಡಳಿತ ಸುಧಾರಣೆಗಾಗಿ ಅಂಗೀಕೃತ ವೆಚ್ಚಗಳಿಗೆ ಬಳಸಿಕೊಳ್ಳಲು. | ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ |
| ಎಸ್–17 | ಸರ್ಕಾರಿ ಪ್ರೌಢಶಾಲಾ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳ ಸರ್ಕಾರೇತರ ಶುಲ್ಕಗಳ ಮರುಪಾವತಿಗಾಗಿ (ಶಾಲಾಬ್ಯಾಗ್, ನೋಟ್ ಪುಸ್ತಕ)<br>2202-02-800-1-06-<br>422-1000.00 ಲಕ್ಷ<br>423- 150.00 ಲಕ್ಷ | **1150.00** | ಈ ಕಾರ್ಯಕ್ರಮಕ್ಕೆ ನಿಗದಿಯಾಗಿರುವ 1150.00ಲಕ್ಷರೂಪಾಯಿಗಳ[ಒಂದು ಸಾವಿರದ ಒಂದು ನೂರಾ ಐವತ್ತು ಲಕ್ಷ ರೂಪಾಯಿಗಳು ಮಾತ್ರ] ಇದರ ಮಿತಿಯೊಳಗೆ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ಕಲಿಯುತ್ತಿರುವ ಪ.ಜಾತಿ/ಪ.ಪಂಗಡದ ಎಲ್ಲಾ ಬಾಲಕ/ ಬಾಲಕಿಯರ ಪೈಕಿ 1 ರಿಂದ 5ನೇ ತರಗತಿ ಮಕ್ಕಳಿಗೆ ತಲಾ ಒಂದು ಶಾಲಾ ಬ್ಯಾಗ್ ಮತ್ತು 1 ರಿಂದ 4ನೇ ತರಗತಿ ಮಕ್ಕಳಿಗೆ ತಲಾ 3 ನೋಟ್ ಪುಸ್ತಕ ಮತ್ತು 5 ರಿಂದ 7ನೇ ತರಗತಿ ಮಕ್ಕಳಿಗೆ ತಲಾ 5 ನೋಟ್ ಪುಸ್ತಕ ಮತ್ತು 8 ರಿಂದ 10ನೇ ತರಗತಿ ಮಕ್ಕಳಿಗೆ ತಲಾ 6 ನೋಟ್ ಪುಸ್ತಕದಂತೆ ಪ್ರತಿ ಶಾಲಾ ಬ್ಯಾಗ್‌ನ ದರ ರೂ.83.00 ಹಾಗೂ ಪ್ರತಿ ನೋಟ್ ಪುಸ್ತಕದ ದರ ರೂ.13.00ಗಳಿಗೆ ಮೀರದಂತೆ ಒಟ್ಟು 19.30ಲಕ್ಷ ಮಕ್ಕಳಿಗೆ ಸರಬರಾಜು ಮಾಡುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು | ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–18 | ಮಾಸ್ತಿ ವೆಂಕಟೇಶ ಅಯ್ಯಂಗಾರ್ ಶಾಲೆ<br>2202–80–800–0–32–059 | **10.00** | ಮಾಲೂರು ತಾಲ್ಲೂಕು ಮಾಸ್ತಿಯಲ್ಲಿನ ಸರ್ಕಾರಿ ವಸತಿ ಪ್ರೌಢಶಾಲೆಯ ವಸತಿ ವಿಭಾಗದ ನಿರ್ವಹಣಾ ವೆಚ್ಚಗಳನ್ನು (ಹೆಚ್ಚುವರಿ ಸಿಬ್ಬಂದಿ ವೇತನಗಳೂ ಸೇರಿದಂತೆ) ಭರಿಸುವ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್ ಮೂಲಕ ಅನುಷ್ಠಾನಗೊಳಿಸಲು. | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–19 | ಸೈನಿಕ ಶಾಲೆ, ಕೂಡಿಗೆ, ಕೊಡಗು ಜಿಲ್ಲೆ. 4202–01–202–1–04–386–800.00 ಲಕ್ಷ | **800.00** | ಈ ಕಾರ್ಯಕ್ರಮಕ್ಕೆ ನಿಗದಿಯಾಗಿರುವ 1100.00ಲಕ್ಷರೂಪಾಯಿಗಳ[ಒಂದು ಸಾವಿರದ ಒಂದು ನೂರು ರೂಪಾಯಿಗಳುಮಾತ್ರ] | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, |

| | | | | |
|---|---|---|---|---|
| | 2202–02–107–5–00–059–150.00 **ಲಕ್ಷ**<br>422–100 ಲಕ್ಷ<br>423– 50.00ಲಕ್ಷ | **300.00** | ಮಿತಿಯೊಳಗೆ ಕಟ್ಟಡ ಇತ್ಯಾದಿ ಹೊಸದಾಗಿ ನಿರ್ಮಾಣ ಮಾಡಲು, ಆವರ್ತಕ ಮತ್ತು ಅನಾವರ್ತಕ ವೆಚ್ಚಗಳನ್ನು ಭರಿಸುವ ಹಾಗೂ ವಿಶೇಷ ಘಟಕ ಮತ್ತು ಗಿರಿಜನ ಉಪಯೋಜನೆಗೆ ಸಂಬಂಧಿಸಿದಂತೆ ಅನುದಾನವನ್ನು ಅದೇ ಉದ್ದೇಶಕ್ಕೆ ಬಳಸಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | ಬೆಂಗಳೂರು. |
| ಎಸ್–20 | ಬಿಜಾಪುರ ಸೈನಿಕ ಶಾಲೆ<br>4202–01–202–1–06–386 | **200.00** | ಈ ಕಾರ್ಯಕ್ರಮಕ್ಕೆ 200.00 ಲಕ್ಷ ರೂಪಾಯಿಗಳು [ಇನ್ನೂರು ಲಕ್ಷ ರೂಪಾಯಿಗಳು ಮಾತ್ರ] ನಿಗದಿ ಯಾಗಿದ್ದು, ಇದರ ಮಿತಿಯೊಳಗೆ ಸದರಿ ಶಾಲೆಗೆ ಕ್ರೀಡಾಂಗಣ ನಿರ್ಮಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು, | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–21 | ಕಿತ್ತೂರು ರಾಣಿ ಚೆನ್ನಮ್ಮ ಹೆಣ್ಣು ಮಕ್ಕಳ ಸೈನಿಕ ವಸತಿ ಶಾಲೆ, ಕಿತ್ತೂರು.<br>2202–02–110–3–03–101– | **200.00** | ಈ ಕಾರ್ಯಕ್ರಮಕ್ಕೆ 200.00 ಲಕ್ಷ ರೂಪಾಯಿಗಳು [ಇನ್ನೂರು ಲಕ್ಷ ರೂಪಾಯಿಗಳು ಮಾತ್ರ] ನಿಗದಿಯಾಗಿದ್ದು, ಇದರ ಮಿತಿಯೊಳಗೆ ಕಾಂಪೌಂಡ್, ಡೈರಿ, ಕುದುರೆ ಕೊಳ್ಳಲು, ಮೈದಾನ ದುರಸ್ತಿ ಹಾಗೂ ಇತರೆ ಕಾರ್ಯಗಳಿಗಾಗಿ ಬಳಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–22 | ವೈದ್ಯನಾಥನ್ ಸಮಿತಿ ಶಿಫಾರಸ್ಸುಗಳನ್ನು ಅಳವಡಿಸುವ ಬಗ್ಗೆ<br>2202–80–800–0–34–059 | **200.00** | ಈ ಕಾರ್ಯಕ್ರಮಕ್ಕೆ 200.00ಲಕ್ಷ ರೂಪಾಯಿಗಳು [ಇನ್ನೂರು ಲಕ್ಷ ರೂಪಾಯಿಗಳು ಮಾತ್ರ] ನಿಗದಿ ಯಾಗಿದ್ದು, ಇದರ ಮಿತಿಯೊಳಗೆ ಹಿಂದುಳಿದ 114 ಬ್ಲಾಕ್‌ಗಳಲ್ಲಿ ದೈಹಿಕ ಶಿಕ್ಷಣ ಅಭಿವೃದ್ಧಿಗೊಳಿಸಲು. ಹಾಗೂ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದೈಹಿಕ ಶಿಕ್ಷಣ ಮತ್ತು ಯೋಗ ಶಿಕ್ಷಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರೂ 125.00 ಲಕ್ಷ. ಮತ್ತು ಉನ್ನತೀಕರಿಸಿದ ದೈಹಿಕ ಶಿಕ್ಷಣ ಶಿಕ್ಷಕರ ವೇತನ ನೀಡುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ರೂ 75.00 ಲಕ್ಷ ಒದಗಿಸಿದೆ. | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–23<br>**ಎಸ್.ಡಿ.ಪಿ. 3** | 39 ಹಿಂದುಳಿದ ತಾಲ್ಲೂಕುಗಳಲ್ಲಿ ಸಮೂಹ ಸಂಕೀರ್ಣ ನಿರ್ಮಾಣ(ಶಿಕ್ಷಕರ ವಸತಿ ಗೃಹ)<br>4202–01–201–1–03–133 | **1800.00** | ಡಾ ನಂಜುಡಪ್ಪ ವರದಿ ಆಧಾರದ ಮೇಲೆ ಹಿಂದುಳಿದ ತಾಲ್ಲೂಕುಗಳಲ್ಲಿ ಶಿಕ್ಷಕರ ಸಮೂಹ ವಸತಿ ಗೃಹ ನಿರ್ಮಿಸುವ ಕಾರ್ಯಕ್ರಮ ಅನುಷ್ಠಾನಗೊಳಿಸಲು. | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್–24 | **ಆರ್.ಎಂ.ಎಸ್.ಎ** ಚಟುವಟಿಕೆಗಳು.<br>ರಾಜ್ಯದ ಪಾಲು ಶೇ.25%ರಂತೆ | **5030.00** | ಈ ಕಾರ್ಯಕ್ರಮಕ್ಕೆ ನಿಗದಿಯಾಗಿರುವ 5030.00ಲಕ್ಷ ರೂಪಾಯಿಗಳ[ಐದು ಸಾವಿರದ ಮೂವತ್ತು ಲಕ್ಷ ರೂಪಾಯಿಗಳು ಮಾತ್ರ] ಮಿತಿಯೊಳಗೆ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಚಟುವಟಿಕೆ ಗಳಿಗಾಗಿ ರಾಜ್ಯದ ಪಾಲಿನ ವೆಚ್ಚ ಭರಿಸಿ (ಕೇಂದ್ರ ಸರ್ಕಾರದಿಂದ ಅದರ ಪಾಲಿನ ಅನುದಾನ ಬಿಡುಗಡೆಯಾಗುವುದನ್ನು ಖಚಿತಪಡಿಸಿಕೊಂಡು) ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು, | ರಾಜ್ಯ ಯೋಜನಾ ನಿರ್ದೇಶಕರು, ಆರ್.ಎಂ.ಎಸ್.ಎ. |
| ಎಸ್.25 | ವಿದ್ಯಾರ್ಥಿ ವೇತನಗಳು ಮತ್ತು ಸೆಮಿನಾರ್‌ಗಳು(ಸಂಸ್ಕೃತ ಶಿಕ್ಷಣ)<br>2202–05–103–0–05–059 | **50.00** | 1. ಸರ್ಕಾರಿ ಪ್ರೌಢಶಾಲಾ ಮತ್ತು ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸಂಸ್ಕೃತ ಭಾಷೆಯಲ್ಲಿ ವ್ಯಾಸಂಗ | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, |

| | | | | |
|---|---|---|---|---|
| | | | ಮಾಡುತ್ತಿರುವ ವಿದ್ಯಾರ್ಥಿಗಳ ವಿದ್ಯಾರ್ಥಿವೇತನಕ್ಕಾಗಿ 2. ಸರ್ಕಾರಿ ಪ್ರೌಢಶಾಲಾ ಮತ್ತು ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು. | ಬೆಂಗಳೂರು. |
| ಎಸ್ 26 **ಎಸ್.ಡಿ.ಪಿ. 1** | ಹೆಣ್ಣು ಮಕ್ಕಳಿಗಾಗಿ ಕೆ.ಜಿ.ಬಿ.ವಿ. ವಸತಿ ನಿಲಯಗಳ ಪ್ರಾರಂಭ 2202-02-800-1-15-<br>133- 1500.00 ಲಕ್ಷ<br>422- 600.00 ಲಕ್ಷ<br>423- 300.00 ಲಕ್ಷ | **2400.00** | ಈ ಕಾರ್ಯಕ್ರಮಕ್ಕೆ 2400.00ಲಕ್ಷ ರೂಪಾಯಿಗಳು [ಎರಡು ಸಾವಿರದ ನಾಲ್ಕು ನೂರು ಲಕ್ಷ ರೂಪಾಯಿಗಳು ಮಾತ್ರ] ನಿಗದಿಯಾಗಿದ್ದು, ಇದರ ಮಿತಿಯೊಳಗೆ ಡಾ:ನಂಜುಂಡಪ್ಪ ವರದಿ ಆಧಾರದ ಮೇಲೆ ಹಿಂದುಳಿದ ತಾಲ್ಲೂಕುಗಳಲ್ಲಿ ಕರ್ನಾಟಿಕ ಕೆ.ಜಿ.ಬಿ.ವಿ ವಸತಿ ನಿಲಯದ 2009-10ನೇ ಸಾಲಿನ ಬಾಕಿ ಇರುವ ಅನಾವರ್ತಕ ವೆಚ್ಚ ಭರಿಸಲು ರೂ.55.15ಲಕ್ಷ, ಅತೀ ಹಿಂದುಳಿದ ತಾಲ್ಲೂಕು ಗಳಲ್ಲಿನ ವಸತಿ ನಿಲಯದ 2010-11ನೇ ಸಾಲಿನಲ್ಲಿನ ಬಾಕಿ ಇರುವ ಅನಾವರ್ತಕ ವೆಚ್ಚ 1448.00ಲಕ್ಷರೂಗಳನ್ನು ಭರಿಸಲು, ಮತ್ತು 2011-12ನೇ ಸಾಲಿನ ಆವರ್ತಕ ವೆಚ್ಚ ರೂ.896.85ಲಕ್ಷರೂಗಳಲ್ಲಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಮತ್ತು ವಿಶೇಷ ಅಭಿವೃದ್ಧಿ ಯೋಜನೆಗಳಿಗೆ ನಿಗದಿಯಾಗಿರುವ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸಿಕೊಳ್ಳುವ ಷರತ್ತನ್ನು ವಿಧಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು, | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್ 27 **ಎಸ್.ಡಿ.ಪಿ. 2** | ಪ್ರೌಢಶಾಲೆಗಳಿಗೆ ಮೂಲಭೂತ ಸೌಲಭ್ಯ<br>4202-01-202-1-05<br>133-1500.00 ಲಕ್ಷ<br>422-500.00 ಲಕ್ಷ<br>423-375.00 ಲಕ್ಷ | **2375.00** | ಈ ಕಾರ್ಯಕ್ರಮಕ್ಕೆ ನಿಗದಿಯಾಗಿರುವ 2375.00ಲಕ್ಷ ರೂಪಾಯಿಗಳ [ಎರಡು ಸಾವಿರದ ಮುನ್ನೂರಾ ಎಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ] ಮಿತಿಯೊಳಗೆ 2009-10ನೇ ಸಾಲಿನ ಬಾಕಿ ರೂ 126.24 ಲಕ್ಷ, 2010-11ನೇ ಸಾಲಿನ ಬಾಕಿ ರೂ.750.00ಲಕ್ಷ, ಮತ್ತು 2011-12ನೇ ಸಾಲಿಗೆ ರೂ 1498.76ಲಕ್ಷಗಳಲ್ಲಿ ಡಾ:ನಂಜುಂಡಪ್ಪ ವರದಿಯನುಸಾರ ರಾಜ್ಯದ ಹಿಂದುಳಿದ ಪ್ರದೇಶದ ಸರ್ಕಾರಿ ಪ್ರೌಢಶಾಲೆಗಳಿಗೆ ಕೊಠಡಿ ನಿರ್ಮಾಣ ಮಾಡಲು ಹಾಗೂ ಪೀಠೋಪಕರಣ ವ್ಯವಸ್ಥೆ ಕಲ್ಪಿಸಲು, ಮತ್ತು ವಿಶೇಷ ಅಭಿವೃದ್ಧಿ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸುವ ಷರತ್ತನ್ನು ವಿಧಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು, | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್ 28 **ಎಸ್.ಡಿ.ಪಿ. 4** | ಕಾಂಪೌಂಡ್ ಮತ್ತು ಆಟದ ಮೈದಾನ ಸೌಲಭ್ಯ.<br>4202-01-201-1-04-133 | **300.00** | ಈ ಕಾರ್ಯಕ್ರಮಕ್ಕೆ 300.00ಲಕ್ಷ ರೂಪಾಯಿಗಳು [ಮುನ್ನೂರು ಲಕ್ಷ ರೂಪಾಯಿಗಳು ಮಾತ್ರ] ನಿಗದಿಯಾಗಿದ್ದು, ಇದರ ಮಿತಿಯೊಳಗೆ ಡಾ:ನಂಜುಂಡಪ್ಪ ವರದಿಯನುಸಾರ ರಾಜ್ಯದ ಅತ್ಯಂತ ಹಿಂದುಳಿದ 114 ತಾಲ್ಲೂಕುಗಳ ಶಾಲೆಗಳಿಗೆ ಕಾಂಪೌಂಡ್ ವ್ಯವಸ್ಥೆ ಹಾಗೂ ಆಟದ ಮೈದಾನ ಒದಗಿಸುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು, | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |

| | | | | |
|---|---|---|---|---|
| ಎಸ್ 29 **ಕೇಂದ್ರ ಪುರಸ್ಕೃತ** | ಸಂಸ್ಕೃತ ಶಿಕ್ಷಣ ಅಭಿವೃದ್ಧಿಗಾಗಿ ಕೇಂದ್ರ ವಲಯ ಯೋಜನೆ 2202-05-103-0-20-101 | **1000.00** | ಈ ಕಾರ್ಯಕ್ರಮವು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು ಇದಕ್ಕಾಗಿ 1000.00ಲಕ್ಷರೂಪಾಯಿ ಗಳು[ಒಂದುಸಾವಿರಲಕ್ಷರೂಪಾಯಿಗಳುಮಾತ್ರ] ನಿಗದಿಯಾಗಿದ್ದು, ಇದರ ಮಿತಿಯೊಳಗೆ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯನ್ನು ಖಚಿತ ಪಡಿಸಿಕೊಂಡ ನಂತರ ಕಾರ್ಯಕ್ರಮ ಅನುಷ್ಠಾನ ಗೊಳಿಸಲು, | ನಿರ್ದೇಶಕರು (ಪ್ರೌಢಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು. |
| ಎಸ್ 30 | 13ನೇ ಆರ್ಥಿಕ ಆಯೋಗದ ಅನುದಾನ-ಪ್ರಾಥಮಿಕ ಶಿಕ್ಷಣ (ಎಸ್.ಎಸ್.ಎ) 2202-01-800-1-53 102-2716.92 ಲಕ್ಷ 133-1500.00 ಲಕ್ಷ 422-4142.75 ಲಕ್ಷ 423-3540.33 ಲಕ್ಷ | **11900.00** | ಈ ಕಾರ್ಯಕ್ರಮಕ್ಕೆ ನಿಗದಿಯಾಗಿರುವ 11900.00ಲಕ್ಷರೂಪಾಯಿಗಳ[ಹನ್ನೊಂದು ಸಾವಿರದ ಒಂಭೈನೂರುಲಕ್ಷ ರೂಪಾಯಿಗಳು ಮಾತ್ರ] ಮಿತಿಯೊಳಗೆ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು | ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ |
| **ಒಟ್ಟೂ ಅನುದಾನ** | | **72294.00** | **ಒಟ್ಟೂ ರೂ ಏಳು ನೂರಾ ಇಪ್ಪತ್ತೆರಡು ಕೋಟಿ ತೊಂಭತ್ನಾಲ್ಕು ಲಕ್ಷ ಮಾತ್ರ.** | |

**ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಬಂಧಿಸಿದ ಅನುಷ್ಠಾನಾಧಿಕಾರಿಗಳ ವಿಲೇವಾರಿಯಲ್ಲಿ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಬಿಡುಗಡೆ ಮಾಡಿದೆ.**

1. ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಾಗ ಸರ್ಕಾರಿ ಆದೇಶದಲ್ಲಿ ವಿಧಿಸಿರುವ ನಿಬಂಧನೆಗಳನ್ವಯ ಅನುಷ್ಠಾನಗೊಳಿಸಲು ತಿಳಿಸಿದೆ. ಹಾಗೂ ಪ್ರತಿ ಮಾಹೆ ಆರ್ಥಿಕ ಹಾಗೂ ಬೌತಿಕ ಪ್ರಗತಿಯ ವರದಿಯನ್ನು ಯೋಜನಾ ಶಾಖೆಗೆ ಪ್ರತಿ ಮಾಹೆಯ 10ನೇ ತಾರೀಖಿನೊಳಗೆ ಎಂಪಿಕ್ ವರದಿಗಾಗಿ ತಪ್ಪದೆ ಕಳುಹಿಸುವುದು.
2. ಕಾರ್ಯಕ್ರಮಗಳ ಮುಂದೆ ನಮೂದಿಸಿರುವ ಹಣದ ಮಿತಿಯೊಳಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಹಾಗೂ ಯಾವುದೇ ಕಾರಣಕ್ಕೂ ನಿಗದಿಗೊಳಿಸಿರುವ ಹಣಕ್ಕಿಂತ ಹೆಚ್ಚು ವೆಚ್ಚ ಭರಿಸಬಾರದೆಂದು ತಿಳಿಸಿದೆ. ಹಾಗೂ ಸದರಿ ಮೊತ್ತವನ್ನು ಅನುಮೋದಿತ ಚಟುವಟಿಕೆಗಳಿಗೆ ಮಾತ್ರ ಬಳಸಿಕೊಳ್ಳಲು ಸೂಚಿಸಿದೆ.
3. ಉಲ್ಲೇಖದ ಸರ್ಕಾರಿ ಆದೇಶದಲ್ಲಿನ ಸೂಚನೆಗಳನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.
4. ಖರೀದಿಗೆ ಸಂಬಂಧಿಸಿದಂತೆ ಪ್ರಸ್ತುತ ಜಾರಿಯಲ್ಲಿರುವ ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಮತ್ತು ಅದರಡಿಯಲ್ಲಿನ ನಿಯಮಗಳನ್ನು ಚಾಚೂ ತಪ್ಪದೆ ಕಡ್ಡಾಯವಾಗಿ ಹಾಗೂ ಕಟ್ಟು ನಿಟ್ಟಾಗಿ ಪಾಲಿಸಲು ತಿಳಿಸಿದೆ.
5. ಕಂಪ್ಯೂಟರ್‌ಗಳಿಗೆ ಸಂಬಂಧಿಸಿದಂತೆ, ಇ-ಗವರ್ನೆನ್ಸ್ ಇಲಾಖೆಯು ಸೂಚಿಸಿರುವಂತೆ ಕ್ರಿಯಾ ಯೋಜನೆಗೆ ರಾಜ್ಯಮಟ್ಟದ ಉನ್ನತಾಧಿಕಾರಿ ಸಮಿತಿಯ ಮತ್ತು ಟ್ಯಾಪ್ ಸಮಿತಿಯ ಅನುಮೋದನೆ ಪಡೆಯತಕ್ಕದ್ದು.
6. ಕ್ರಮ ಸಂಖ್ಯೆ ಎಸ್-4ರಲ್ಲಿನ ಸರ್ವ ಶಿಕ್ಷಣ ಅಭಿಯಾನ ಸಮಿತಿಯ ಕೇಂದ್ರ ಕಾರ್ಯಾಲಯ ಮತ್ತು ರಾಜ್ಯ ಮಟ್ಟದಲ್ಲಿ ಭರಿಸಬೇಕಾದ ವೆಚ್ಚಗಳ ಶೇಕಡಾ 50ರಷ್ಟು ರಾಜ್ಯದ ಪಾಲನ್ನು ಕೇಂದ್ರ ಸರ್ಕಾರದಿಂದ ಶೇಕಡಾ 50ರಷ್ಟು ಹಣ ಬಿಡುಗಡೆಯಾದಂತೆ ರಾಜ್ಯದ ಪಾಲನ್ನು ಡ್ರಾ ಮಾಡುವ ಅಧಿಕಾರವನ್ನು ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಸಮಿತಿ ಇವರಿಗೆ ಅನುಮೋದನೆ ನೀಡಿದೆ. ಇದೇ ರೀತಿ ಕ್ರಮ ಸಂಖ್ಯೆ ಎಸ್-3(8),ಎಸ್-3(9) ಮತ್ತು ಎಸ್-5, ಎಸ್-16, ಎಸ್-24ರಲ್ಲಿನ ಅನುದಾನವನ್ನು ಡ್ರಾ ಮಾಡುವ ಅಧಕಾರವನ್ನೂ ಸಹ ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ ರವರಿಗೆ ಅನುಮೋದನೆ ನೀಡಿದೆ. ಹಾಗೂ ಕ್ರಮ ಸಂಖ್ಯೆ ಎಸ್-30ರಲ್ಲಿನ ಅನುದಾನವನ್ನು ರಾಜ್ಯ ಯೋಜನಾ ನಿರ್ದೇಶಕರು, ಆರ್.ಎಂ.ಎಸ್.ಎ ಇವರಿಗೆ ಅನುಮೋದನೆ ನೀಡಿದೆ.
7. ಕ್ರಮ ಸಂಖ್ಯೆ ಎಸ್-3(1) ರಲ್ಲಿನ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದ ಅನುದಾನವನ್ನು ಉರ್ದು ಮತ್ತು ಇತರೆ ಅಲ್ಪ ಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯವು 2011-12ನೇ ಸಾಲಿನಲ್ಲಿ ಅನುಷ್ಠಾನಗೊಳಿಸಬಹುದಾದ ಕಾರ್ಯಕ್ರಮವಾರು ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಹಾಗೂ ಅಂಗೀಕೃತ ಕಾರ್ಯಕ್ರಮಗಳಿಗೆ ಬೇಕಾದ ಅನುದಾವನ್ನು ಹಂಚಿಕೆ ಮಾಡಿಕೊಂಡು ಅನುಷ್ಠಾನಗೊಳಿಸತಕ್ಕದ್ದು.

8. ಕ್ರಮ ಸಂಖ್ಯೆ ಎಸ್–8(1) ರಲ್ಲಿನ ಕಾರ್ಯಕ್ರಮಕ್ಕೆ ಬಿಡುಗಡೆ ಮಾಡಲಾದ ಅನುದಾನವನ್ನು ಉಪಕಾರ್ಯಕ್ರಮಗಳವಾರು ತಿಳಿಸಲಾಗಿರುವ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸತಕ್ಕದ್ದು.
9. ಕೇಂದ್ರ ಯೋಜನೆ, ಕೇಂದ್ರ ಪುರಸ್ಕೃತ ಯೋಜನೆಗಳಡಿ ಕೇಂದ್ರ ಸರ್ಕಾರವು 2011–12ನೇ ಸಾಲಿಗೆ ಕಾರ್ಯಕ್ರಮಗಳನ್ನು ಮುಂದುವರೆಸಿರುವುದನ್ನು ಮತ್ತು ಆಯವ್ಯಯದ ಹಣ ಒದಗಿಸಿಕೊಂಡಿರುವುದನ್ನು ಮತ್ತು ಹಣದ ಬಿಡುಗಡೆಯನ್ನು ಖಚಿತಪಡಿಸಕೊಂಡು ಕಾರ್ಯಕ್ರಮಗಳನ್ನು ಮುಂದುವರೆಸಿ ಅನುಷ್ಠಾನಗೊಳಿಸತಕ್ಕದ್ದು.
10. ವಿಶೇಷ ಅಭಿವೃದ್ಧಿ ಯೋಜನೆ, ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಕಾರ್ಯಕ್ರಮಗಳಿಗೆ ನಿಗದಿಗೊಳಿಸಿರುವ ಮೊತ್ತವನ್ನು ಆಯಾ ಉದ್ದೇಶಕ್ಕೆ ಬಳಸುವ ಷರತ್ತನ್ನು ವಿಧಿಸಿದೆ.
11. ಅನುದಾನವನ್ನು ಜಿಲ್ಲಾವಾರು ಹಂಚಿಕೆ ಮಾಡುವಾಗ ಜಿಲ್ಲೆಗಳ ಅವಶ್ಯಕತೆಗನುಗುಣವಾಗಿ ಅನುದಾನವನ್ನು ಹಂಚಿಕೆ ಮಾಡುವುದು ಹಾಗೂ ಜಿಲ್ಲೆಗಳಿಂದ ಕೊರತೆ ಅನುದಾನದ ಪ್ರಸ್ತಾವನೆಗಳಿಗೆ ಅವಕಾಶ ನೀಡದಂತೆ ನೋಡಿಕೊಳ್ಳುವುದು. ಹಂಚಿಕೆ ಮಾಡಿದ ಮೊತ್ತಕ್ಕಿಂತ ಹೆಚ್ಚಿಗೆ ಭರಿಸಕೂಡದೆಂದು ಸೂಚಿಸಲು ತಿಳಿಸಿದೆ.
12. ಜಿಲ್ಲೆಯ ಉಪನಿರ್ದೇಶಕರುಗಳಿಗೆ/ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಜಿಲ್ಲಾವಾರು ಹಂಚಿಕೆ ಮಾಡಲಾಗುವ ಮೊತ್ತವನ್ನು ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು–1 ಇಲ್ಲಿಗೆ ಖಜಾನೆ ಗಣಕೀಕರಣ ಮಾಡಲು ಕ್ರಮ ಕೈಗೊಳ್ಳುವುದು. ಡಿಡಿಓ ಕೋಡ್ ಸಮೇತ ON LINE ಗಣಕೀಕರಣ ಮಾಡದೇ ಇದ್ದ ಪಕ್ಷದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಖಜಾನೆಗಳಲ್ಲಿ ಡ್ರಾ ಮಾಡಿಕೊಳ್ಳಲು ಕಷ್ಟ ಸಾಧ್ಯವಾಗುತ್ತದೆ. ಆದ್ದರಿಂದ ಈ ಕ್ರಮವನ್ನು ತಪ್ಪದೇ ಕೈಗೊಳ್ಳಲು ಹಾಗೂ ಜಿಲ್ಲೆಯ ಉಪನಿರ್ದೇಶಕರುಗಳಿಗೆ ಬಿಡುಗಡೆ ಮಾಡುವ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಲು ತಿಳಿಸಿದೆ.
13. ಅನುಷ್ಠಾನಾಧಿಕಾರಿಗಳು ಕಾರ್ಯಕ್ರಮದ ಅನುಷ್ಠಾನ ಕುರಿತು ಕಛೇರಿ ಜ್ಞಾಪನವನ್ನು ನೀಡದ ಹೊರತು ಅನುದಾನವನ್ನು ಆನ್ ಲೈನ್ ಗಣಕೀಕರಣಗೊಳಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಆಯವ್ಯಯ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್‌ನಲ್ಲಿ ಅಪ್ ಲೋಡ್ ಮಾಡಲು ಅವಶ್ಯಕವಾಗಿ ಬೇಕಾಗಿರುವ ಅನುಷ್ಠಾನಾಧಿಕಾರಿಗಳು ಡಿಡಿಓ ಗಳಿಗೆ ಹೊರಡಿಸಿದ ಕಛೇರಿ ಜ್ಞಾಪನದ ಪ್ರತಿಯನ್ನು ಯೋಜನಾ ಶಾಖೆಯ ಉಪನಿರ್ದೇಶಕರಿಗೆ ತ್ರಿಪ್ರತಿಗಳಲ್ಲಿ ಕಡ್ಡಾಯವಾಗಿ ಕಳುಹಿಸಿಕೊಡಲು ತಿಳಿಸಿದೆ.
14. **ಅನುಷ್ಠಾನಾಧಿಕಾರಿಗಳು ತಮ್ಮ ಕಛೇರಿ ಜ್ಞಾಪನದಲ್ಲಿ ಆಯವ್ಯಯ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಬಿಡುಗಡೆ ಮಾಡಿರುವ ಅನುದಾನವನ್ನು ಜಿಲ್ಲಾ/ತಾಲ್ಲೂಕು ಖಜಾನೆಗಳಲ್ಲಿ ಯಾವ ಬಿಲ್ಲಿನಲ್ಲಿ ಹಣ ಸೆಳೆಯಬೇಕು, ಮೇಲು ಸಹಿ ಅಗತ್ಯವಿದ್ದಲ್ಲಿ ಯಾರಿಂದ ಮೇಲು ಸಹಿ ಪಡೆಯಬೇಕು, ಯಾರಿಗೆ ಹಣ ಬಿಡುಗಡೆ ಮಾಡಬೇಕು, ಯಾರು ಹಣ ಸೆಳೆಯಬೇಕು ಎಂಬ ವಿವರಗಳನ್ನು ಸ್ಪಷ್ಟವಾಗಿ ತಿಳಿಸಿರಬೇಕು.**
15. ಆಯವ್ಯಯ ಲೆಕ್ಕ ಶೀರ್ಷಿಕೆಯಡಿಯಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಆನ್‌ಲೈನ್ ಗಣಕೀಕರಣಗೊಂಡಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ಖಜಾನೆಗೆ ಬಿಲ್ಲುಗಳನ್ನು ಸಲ್ಲಿಸುವುದು ಹಾಗೂ ಬಿಲ್ಲುಗಳ ಹಣ ಸೆಳೆಯುವ ಬಗ್ಗೆ ವೈಯಕ್ತಿಕವಾಗಿ ನಿಗಾ ವಹಿಸತಕ್ಕದ್ದು.
16. 2011–12ನೇ ಸಾಲಿನಲ್ಲಿ ಹೊಸ ಆಯವ್ಯಯದಲ್ಲಿ ಯೋಜನಾ ಕಾರ್ಯಕ್ರಮಗಳಡಿಯಲ್ಲಿಯ ಮುಂದುವರೆದ ಯೋಜನೆಗಳಿಗೆ ಮಾಡುವ ವೆಚ್ಚವನ್ನು ಆರ್ಥಿಕ ಇಲಾಖೆಯು ಹೊರಡಿಸಿರುವ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಫ್.ಡಿ. 4 ಬಿಪಿಇ 2011, ಬೆಂಗಳೂರು ದಿನಾಂಕ:31ನೇ ಮಾರ್ಚ್ 2011ರ ಆದೇಶದಲ್ಲಿ ತಿಳಿಸಿದಂತೆ 2011–12ನೇ ಸಾಲಿನ ಲೇಖಾನುದಾನದ ಮಿತಿಯೊಳಗೆ 1ನೇ ಏಪ್ರಿಲ್ 2011ರಿಂದ 31ನೇ ಜುಲೈ 2011 ರವರೆಗೆ ಮಾತ್ರ ವೆಚ್ಚದ ಮಿತಿ ಹಾಗೂ ಸೂಚನೆಗಳನ್ನು ಪಾಲಿಸಲು ಸೂಚಿಸಿದೆ.
17. ಸಧ್ಯದಲ್ಲಿ ಅನುಷ್ಠಾನದಲ್ಲಿರುವ ಕಟ್ಟಡಗಳಿಗೆ ಅಂದಾಜು ವೆಚ್ಚದ ಶೇಕಡ 30ನ್ನು ಮೊದಲು ಒದಗಿಸಿಕೊಂಡು ನಂತರವೇ ಉಳಿಕೆ ಅನುದಾನವನ್ನು ಹೊಸ ಕಾಮಗಾರಿಗಳಿಗೆ ಉಪಯೋಗಿಸತಕ್ಕದ್ದು.
18. ಯೋಜನಾ ವೆಚ್ಚಗಳ ಬಗ್ಗೆ ಅನುಷ್ಠಾನಾಧಿಕಾರಿಗಳು ಮಾಸಿಕ ಮತ್ತು ತ್ರೈಮಾಸಿಕ ಎಂ.ಪಿಕ್ ವೆಚ್ಚಗಳ ವಿವರಣಾ ಪತ್ರದಲ್ಲಿದ್ದಂತೆ ವೆಚ್ಚವನ್ನು ಮಾಡಬೇಕು ಹಾಗೂ ಭೌತಿಕ ಪ್ರಗತಿಯನ್ನು ನಿಗಧಿತ ಅವಧಿಯೊಳಗೆ ತಪ್ಪದೇ ಸಾಧಿಸಿ ವರದಿ ಸಲ್ಲಿಸುವುದು. ವೆಚ್ಚದ ಮಿತಿಯನ್ನು ಮೀರಬಾರದು.
19. ತ್ರೈಮಾಸಿಕ ಪದ್ಧತಿಯಲ್ಲಿ ಅನುದಾನ ಬಿಡುಗಡೆ ಮಡಬೇಕಾದ ನಿಯಮ ಜಾರಿಯಲ್ಲಿರುವುದರಿಂದ ಪ್ರತಿ ತ್ರೈಮಾಸಿಕ ಅವಧಿಯಲ್ಲಿ ಬಿಡುಗಡೆ ಮಾಡಲಾದ ಅನುದಾನದಲ್ಲಿ ಕನಿಷ್ಠ ಶೇಕಡ 80 ರಷ್ಟು ಖರ್ಚು ಭರಿಸಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವ ಬಗ್ಗೆ ಎಂ.ಪಿಕ್ ವರದಿ ಸಲ್ಲಿಸದಿದ್ದ ಪಕ್ಷದಲ್ಲಿ ಮುಂದಿನ ತ್ರೈಮಾಸಿಕ ಅವಧಿಯ ಅನುದಾನವನ್ನು ಬಿಡುಗಡೆ ಮಾಡಲಾಗುವುದಿಲ್ಲ.
20. ಅನುದಾನವನ್ನು ಬಿಡುಗಡೆ ಮಾಡುವಾಗ ಸಂಬಂಧಿಸಿದ ಅಧಿಕಾರಿಗಳು ನಿಗಧಿಪಡಿಸಿದ ಅಧಿಕಾರ ಪ್ರತ್ಯಾಯೋಜನೆ ಮಿತಿಯೊಳಗೆ ಹಣ ಬಿಡುಗಡೆ ಬಗ್ಗೆ ಕ್ರಮ ವಹಿಸತಕ್ಕದ್ದು. ಅಧಿಕಾರ ಪ್ರತ್ಯಾಯೋಜನೆ ಮೀರಿದ ಸಂದರ್ಭದಲ್ಲಿ ಮುಂದುವರಿಕೆ ಕಾರ್ಯಕ್ರಮಗಳ ಮಂಜೂರಾತಿ ಆದೇಶದ ಮೇಲೆಯೇ ಹಣವನ್ನು ಖಜಾನೆಯಿಂದ ಸೆಳೆಯಬಾರದು. ಇದಕ್ಕಾಗಿ ಸರ್ಕಾರದಿಂದ ಹಣ ಬಿಡುಗಡೆ ಆದೇಶವನ್ನು ಪ್ರತ್ಯೇಕವಾಗಿ ಪಡೆಯತಕ್ಕದ್ದು.

21. ಮೊದಲನೇ ತ್ರೈಮಾಸಿಕ ಅವಧಿಗೆ ಬಿಡುಗಡೆ ಮಾಡಲಾಗುವ ಅನುದಾನದ ವಿವರವನ್ನು ಪ್ರತ್ಯೇಕ ಸುತ್ತೋಲೆಯಲ್ಲಿ ನೀಡಲಾಗುವುದು. ಈ ಮಧ್ಯಂತರ ಅವಧಿಯಲ್ಲಿ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿಕೊಳ್ಳಲು ತಿಳಿಸಲಾಗಿದೆ.

**(ಸಹಿ)**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ.**

ಗೆ:

1. ಸರ್ಕಾರದ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಗೌರವಗಳೊಂದಿಗೆ.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
6. ನಿರ್ದೇಶಕರು ಪ್ರೌಢ/ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು.
7. ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
8. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. 100 ಅಡಿ ವರ್ತುಲ ರಸ್ತೆ, ಹೊಸಕೆರೆ ಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು. 560 085.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ, ಡಿ.ಎಸ್.ಇ.ಆರ್.ಟಿ, ಬೆಂಗಳೂರು. 560 085.
10. ನಿರ್ದೇಶಕರು(ಮೈನಾರಿಟಿ) ಆಯುಕ್ತರ ಕಛೇರಿ, ಬೆಂಗಳೂರು.
11. ಸಹ ನಿರ್ದೇ ಶಕರು, ಎಸ್.ಎಸ್.ಎ. ಆಯುಕ್ತರ ಕಛೇರಿ ಪೂರಕ ಕಟ್ಟಡ, ಬೆಂಗಳೂರು.
12. ಸಹ ನಿರ್ದೇಶಕರು(ಆಡಳಿತ) ಸಾ.ಶಿ.ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
13. ಸಹ ನಿರ್ದೇಶಕರು(ಶಾಲಾ ಶಿಕ್ಷಣ) ಸಾ.ಶಿ.ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
14. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಸೆಂಟ್ರಲ್ ಕಾಲೇಜು ಕಟ್ಟಡ, ಬೆಂಗಳೂರು.
15. ಎಲ್ಲಾ ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ.
16. ಖಜಾನಾಧಿಕಾರಿಗಳು ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
17. ಮುಖ್ಯ ಲೆಕ್ಕಾಧಿಕಾರಿಗಳು, ಆಯುಕ್ತರ ಕಛೇರಿ, ಬೆಂಗಳೂರು.
18. ಶಾಖಾಧಿಕಾರಿಗಳು,ಆದ್ಯರ್ಪಣೆ ಮತ್ತು ಮರುಹೊಂದಾಣಿಕೆ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು.
19. ಉಪನಿರ್ದೇಶಕರು, ಎನ್.ಎಂ.ಸಿ. ಖನಿಜಭವನ, ಬೆಂಗಳೂರು.
20. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು.
21. ಕಛೇರಿ ಪ್ರತಿ.